

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **21-01-2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ. بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೀಗೆ ಬರೆದಿರುವರು: ಮದೀನ ತಲುಪಿದ ನಂತರ ಹಝ್ರತ್ ಪೈಗಂಬರ್(ಸ)ರ ಒಂಟೆಯು ಕುಳಿತಕೊಂಡ ಸಹಲ್ ಮತ್ತು ಸುಹೈಲ್‌ರ ಭೂಮಿಯನ್ನು ಹಝ್ರತ್ ಪೈಗಂಬರ್(ಸ) ಮಸೀದಿ ಮತ್ತು ತನ್ನ ಕೊಠಡಿಗಳ ನಿರ್ಮಾಣಕ್ಕಾಗಿ ಇಷ್ಟಪಟ್ಟರು ಮತ್ತು ಅದನ್ನು 10 ದೀನಾರಿಗೆ ಹಝ್ರತ್ ಅಬೂಬಕರ್(ರ)ರ ಹಣದಿಂದ ಖರೀದಿ ಮಾಡಿದರು. ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಪೈಗಂಬರ್(ಸ) ದುಆ ಮಾಡಿ ಅಡಿಗಲ್ಲನ್ನು ಇರಿಸಿದರು ಮತ್ತು ಹಝ್ರತ್ ಅಬೂಬಕರ್(ರ)ರೊಡನೆ ಹೀಗೆ ಹೇಳಿದರು: ನನ್ನ ಕಲ್ಲಿನ ಜೊತೆಗೆ ನಿಮ್ಮ ಕಲ್ಲನ್ನು ಇರಿಸಿರಿ. ಅನಂತರ ಹಝ್ರತ್ ಉಮರ್(ರ)ರೊಡನೆ ಹೇಳಿದರು: ನಿಮ್ಮ ಕಲ್ಲನ್ನು ಹಝ್ರತ್ ಅಬೂಬಕರ್‌ರ ಕಲ್ಲಿನ ಸಮೀಪ ಇರಿಸಿರಿ. ಅನಂತರ ಹಝ್ರತ್ ಉಸ್ಮಾನ್(ರ)ರೊಡನೆ ಹೇಳಿದರು: ನಿಮ್ಮ ಕಲ್ಲನ್ನು ಉಮರ್‌ರ ಕಲ್ಲಿನ ಜೊತೆಗೆ ಇರಿಸಿರಿ. ಮಸ್‌ಜಿದ್ ನಬವಿಯ ಸಂಪೂರ್ಣ ನಿರ್ಮಾಣ ಕಾರ್ಯದಲ್ಲೂ, ಅನಂತರ ಹಿಜರಿ 7ರ ಮುಹರ್ರಮ್‌ನಲ್ಲಿ ಖೈಬರ್ ಯುದ್ಧದಿಂದ ವಿಜಯಿಯಾಗಿ ಮರಳಿದ ಬಳಿಕ ನಡೆದ ಅದರ ವಿಸ್ತರಣೆ ಮತ್ತು ಪುನರ್ ನಿರ್ಮಾಣ ಕಾರ್ಯದಲ್ಲೂ ಹಝ್ರತ್ ಪೈಗಂಬರ್(ಸ) ಸಹಾಬಿಯರ ಜೊತೆ ಭಾಗಿಯಾಗಿದ್ದರು.

ಸಹೀಹ್ ಬುಖಾರಿಯ ವ್ಯಾಖ್ಯಾನಗಾರ ಅಲ್ಲಾಮ ಖಿಸ್ತಲಾನಿ ವರದಿ ಮಾಡುತ್ತಾರೆ: ಸಾಹೋದರ್ಯ ಸಂಬಂಧ ಸ್ಥಾಪನೆ ಎರಡು ಬಾರಿ ನಡೆದಿದ್ದುವು. ಹಝ್ರತ್ ಪೈಗಂಬರ್(ಸ) ಮೊದಲ ಬಾರಿ ಹಿಜ್ರತಿಗೆ ಮುಂಚೆ ಮಕ್ಕದಲ್ಲಿ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ)ರ ನಡುವೆ, ಹಝ್ರತ್ ಹಂಝ ಮತ್ತು ಹಝ್ರತ್ ಝೈದ್ ಬಿನ್ ಹಾರಿಸ(ರ) ನಡುವೆ, ಹಝ್ರತ್ ಉಸ್ಮಾನ್(ರ) ಮತ್ತು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ನಡುವೆ, ಹಝ್ರತ್ ಝುಬೇರ್ ಮತ್ತು ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ) ನಡುವೆ ಹಾಗೂ ಹಝ್ರತ್ ಅಲಿ(ರ) ಮತ್ತು ಸ್ವತಃ ಹಝ್ರತ್ ಪೈಗಂಬರ್(ಸ)ರ ನಡುವೆ ಸಹೋದರ ಸಂಬಂಧವನ್ನು ಸ್ಥಾಪಿಸಿದರು. ಎರಡನೇ ಬಾರಿ ಹಝ್ರತ್ ಪೈಗಂಬರ್(ಸ) ಹಿಜ್ರತ್ ನಂತರ ಮದೀನದಲ್ಲಿ ಹಝ್ರತ್ ಅನಸ್ ಬಿನ್ ಮಾಲಿಕ್(ರ)ರ ಮನೆಯಲ್ಲಿ ಐವತ್ತು ಮುಹಾಜಿರರ ಮತ್ತು ಐವತ್ತು ಅನ್ಸಾರರ ನಡುವೆ ಸಾಹೋದರ್ಯ ಸಂಬಂಧ ಸ್ಥಾಪಿಸಿದರು.

ಬದ್ರ್ ಯುದ್ಧಕ್ಕಾಗಿ ಹೊರಡುವುದಕ್ಕೆ ಮುಂಚಿತವಾಗಿ ಸಹಾಬಿಯರ ಬಳಿ 70 ಒಂಟೆಗಳಿದ್ದುವು. ಒಂದೊಂದು ಒಂಟೆಯನ್ನು ಮೂರು ಮೂರು ವ್ಯಕ್ತಿಗಳಿಗಾಗಿ ಸರದಿಯಂತೆ ಸವಾರರಾಗಲು ನಿಶ್ಚಯಿಸಲಾಗಿತ್ತು. ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ) ಮತ್ತು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಒಂದು ಒಂಟೆಯಲ್ಲಿ ಸರದಿ ಪ್ರಕಾರ ಸವಾರರಾಗುತ್ತಿದ್ದರು. ಸಿರಿಯದಿಂದ ಬರುತ್ತಿದ್ದ ಅಬೂಸುಫ್‌ಯಾನ್‌ರ ವ್ಯಾಪಾರಿ ತಂಡವನ್ನು ತಡೆಯಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ಬದ್ರಿನ ಕಡೆಗೆ ಮದೀನದಿಂದ ಹೊರಟರು. ಆದರೆ ಖುರೈಶಿಗಳ ಒಂದು ಸೈನ್ಯ ಅತ್ಯಂತ ವೇಗವಾಗಿ ಆ ತಂಡವನ್ನು ರಕ್ಷಿಸಲಿಕ್ಕಾಗಿ ಹೊರಟಿದೆ ಎಂಬ ಮಾಹಿತಿ ಹಝ್ರತ್ ಪೈಗಂಬರ್(ಸ)ರಿಗೆ ಲಭಿಸಿದಾಗ ಅವರು ಸಹಾಬಿಯರೊಡನೆ ಸಲಹೆ ಕೇಳಿದರು. ಶತ್ರುಗಳನ್ನು ಬಿಟ್ಟು ವ್ಯಾಪಾರಿ ತಂಡದ ಕಡೆಗೇನೇ ಹೋಗಬೇಕೆಂದು ಒಂದು ಸಂಘ ಹೇಳಿತು. ಆಗ ಹಝ್ರತ್ ಪೈಗಂಬರ್(ಸ)ರ ಅನುಗ್ರಹೀತ ಮುಖದ ಬಣ್ಣ ಬದಲಾಯಿತು. ಆ ಸಂದರ್ಭದಲ್ಲಿ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ಬಹಳ ಉತ್ತಮವಾಗಿ ಮಾತನಾಡಿದರು. ಹಝ್ರತ್ ಮಿಖ್‌ದಾದ್(ರ) ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನಿಮ್ಮೊಡನೆ ಅಲ್ಲಾಹನು ಆಜ್ಞಾಪಿಸಿರುವುದರ ಕಡೆಗೆ ನೀವು ಹೋಗಿರಿ. ನಾವು ನಿಮ್ಮ ಜೊತೆಗೆ ಖಡ್ಗಗಳೊಂದಿಗೆ ಸೇನಸಾಡುತ್ತಾ ಬರಕುಲ್‌ಗಮಾದ್ ತಲುಪುವ ವರೆಗೂ ನಡೆಯುವೆವು. ಇದನ್ನು ಕೇಳಿ ಹಝ್ರತ್ ಪೈಗಂಬರ್(ಸ)ರ ಅನುಗ್ರಹೀತ ಮುಖ ಬೆಳಗಿತು ಮತ್ತು ಅವರು ಈ ಮಾತಿನಿಂದ ಬಹಳ ಸಂತೋಷಗೊಂಡರು. ಬರಕುಲ್‌ಗಮಾದ್ ಎಂಬುದು ಮಕ್ಕದಿಂದ ಐದು ದಿನಗಳ ಯಾತ್ರೆಯ ದೂರದಲ್ಲಿರುವ ಒಂದು ಪಟ್ಟಣವಾಗಿದೆ.

ಹಝ್ರತ್ ಅಬೂಬಕರ್(ರ)ರ ಶೌರ್ಯದ ಬಗ್ಗೆ ಹಝ್ರತ್ ಅಲಿ(ರ)ರಿಂದ ಒಂದು ವರದಿಯಿದೆ. ಒಮ್ಮೆ ಹಝ್ರತ್ ಅಲಿ(ರ) ಹೀಗೆ ಹೇಳಿದರು: ಜನರಲ್ಲಿ ಅತ್ಯಂತ ಶೂರ ಮತ್ತು ಧೈರ್ಯವಂತ ವ್ಯಕ್ತಿ ಹಝ್ರತ್ ಅಬೂಬಕರ್(ರ) ಆಗಿರುವರು. ಬದ್ರಿನ ದಿನದಂದು ನಾವು ಹಝ್ರತ್ ಪೈಗಂಬರ್(ಸ)ರಿಗಾಗಿ ಶಾಮಿಯಾನವನ್ನು ತಯಾರಿಸಿದೆವು. ಮುಶ್ರಿಕರು ಹಝ್ರತ್ ಪೈಗಂಬರ್(ಸ)ರ ಸಮೀಪ ತಲುಪದಿರಲಿಕ್ಕಾಗಿ ಯಾರು ಹಝ್ರತ್ ಪೈಗಂಬರ್(ಸ)ರೊಡನೆ ಇರುವರು? ಎಂದು ನಾವು ಕೇಳಿದೆವು. ಆಗ ಅಲ್ಲಾಹನಾಣೆ, ನಮ್ಮಲ್ಲಿ ಯಾರೂ ಹಝ್ರತ್ ಪೈಗಂಬರ್(ಸ)ರ ಸಮೀಪಕ್ಕೆ ಹೋಗಲಿಲ್ಲ. ಆದರೆ ಯಾವನೇ ಮುಶ್ರಿಕನು ಹಝ್ರತ್ ಪೈಗಂಬರ್(ಸ)ರ ಸಮೀಪಕ್ಕೆ ತಲುಪುವುದಕ್ಕೆ ಮುಂಚೆ ಹಝ್ರತ್ ಅಬೂಬಕರ್(ರ)ರನ್ನು ಎದುರಿಸಬೇಕಾಗಿ ಬರುವ ರೀತಿಯಲ್ಲಿ ಹಝ್ರತ್ ಅಬೂಬಕರ್(ರ) ಖಡ್ಗವನ್ನು ಎತ್ತಿ ಹಝ್ರತ್ ಪೈಗಂಬರ್(ಸ)ರ ತಲೆಯ ಬಳಿ ನಿಂತರು.

ಈ ಸಂಬಂಧವಾಗಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತಾರೆ: ಬದ್ರ್ ಯುದದ ವೇಳೆ ಹಝ್ರತ್

ಪೈಗಂಬರ್(ಸ)ರಿಗಾಗಿ ಪ್ರತ್ಯೇಕವಾದೊಂದು ಚಪ್ಪರವನ್ನು ತಯಾರಿಸಲಾದಾಗ, ಆ ಅತ್ಯಂತ ಅಪಾಯಕರ ಸಂದರ್ಭದಲ್ಲಿ ಅತಿಯಾದ ಧೈರ್ಯದಿಂದ ಹಝ್ರತ್ ಪೈಗಂಬರ್(ಸ)ರ ಸಂರಕ್ಷಣೆಯ ಕರ್ತವ್ಯವನ್ನು ಹಝ್ರತ್ ಅಬೂಬಕರ್(ರ) ತೆರೆದ ಖಡ್ಗವನ್ನು ಎತ್ತಿ ನಿಂತುಕೊಂಡು ನೆರವೇರಿಸಿದರು. ಹಝ್ರತ್ ಪೈಗಂಬರ್(ಸ) ರಾತ್ರಿ ಪೂರ್ತಿ ರೋದಿಸುತ್ತಾ ದುಆಗಳನ್ನು ಮಾಡುತ್ತಿದ್ದರು. ಒಟ್ಟು ಸೈನ್ಯದಲ್ಲಿ ಹಝ್ರತ್ ಪೈಗಂಬರ್(ಸ) ಮಾತ್ರ ರಾತ್ರಿ ಪೂರ್ತಿ ಎಚ್ಚರದಿಂದಿದ್ದರು.

ಹಝ್ರತ್ ಅಬ್ದುಲ್ಲಾಹ್ ಇಬ್ನು ಅಬ್ಬಾಸ್(ರ) ವರದಿ ಮಾಡುತ್ತಾರೆ: ಬದ್ರ್ ಯುದ್ಧದಂದು ಹಝ್ರತ್ ಪೈಗಂಬರ್(ಸ) ಒಂದು ಸಾವಿರ ಮುಶ್ರಿಕರ ಎದುರಾಗಿ 319 ಸಹಾಬಿಯರನ್ನು ನೋಡಿದಾಗ, ಅವರು ಖಿಬ್ಲದ ಕಡೆಗೆ ಮುಖ ಮಾಡಿ ತನ್ನ ಎರಡೂ ಕೈಗಳನ್ನು ಚಾಚಿ ತನ್ನ ಪ್ರಭುವನ್ನು ಉಚ್ಚ ಸ್ವರದಲ್ಲಿ ಹೀಗೆ ನಿರಂತರವಾಗಿ ಕರೆದರು: ಹೇ ಅಲ್ಲಾಹ್, ನೀನು ನನ್ನೊಡನೆ ಮಾಡಿರುವ ವಾಗ್ದಾನವನ್ನು ಈಡೇರಿಸು. ನೀನು ಮುಸ್ಲಿಮರ ಈ ಗುಂಪನ್ನು ನಾಶಪಡಿಸಿದರೆ, ಭೂಮಿಯಲ್ಲಿ ನಿನ್ನ ಆರಾಧನೆಯನ್ನು ಮಾಡಲಾಗದು. ಹಝ್ರತ್ ಅಬೂಬಕರ್(ರ) ಹೀಗೆ ಹೇಳಿದರು: ನೀವು ನಿಮ್ಮ ಪ್ರಭುವಿನೊಡನೆ ರೋದನೆಯೊಂದಿಗೆ ಮಾಡಿದ ದುಆ ಸಾಕು. ಅವನು ತನ್ನ ವಾಗ್ದಾನವನ್ನು ಖಂಡಿತ ಈಡೇರಿಸುವನು. ಆಗ ಈ ವಚನದ ಅವತೀರ್ಣವಾಯಿತು: **ಇದ್ ತಸ್‌ತಗೀಸೂನ ರಬ್ಬಕುಮ್ ಫಸ್‌ತಜಾಬ ಲಕುಂ ಅನ್ನೀ ಮುಮಿದ್ದುಕುಂ ಬಿಅಲ್‌ಫಿಮ್ಮಿನಲ್ ಮಲಾಇಕತಿ ಮುರ್‌ದಿಫೀನ್**. ಎಂದರೆ, ನಿಮ್ಮ ಪ್ರಭುವಿನೊಡನೆ ನೀವು ಸಹಾಯವನ್ನು ಬೇಡುತ್ತಿದ್ದ ಸಂದರ್ಭ ಜ್ಞಾಪಿಸಿರಿ. ಆಗ ಅವನು, 'ಖಂಡಿತವಾಗಿಯೂ ಒಬ್ಬರ ನಂತರ ಇನ್ನೊಬ್ಬರಂತೆ ಬರುವ ಸಾವಿರ ದೇವದೂತರ (ಮಲಾಇಕ್) ಮೂಲಕ ನಾನು ನಿಮಗೆ ಸಹಾಯ ಮಾಡುವೆನು' ಎಂದು ಉತ್ತರ ನೀಡಿದನು.

ಬದ್ರಿನಲ್ಲಿ ಘೋರವಾದ ಯುದ್ಧ ಶುರುವಾದಾಗ ಹಝ್ರತ್ ಪೈಗಂಬರ್(ಸ) ಚಪ್ಪರದಿಂದ ಹೊರಗೆ ಬಂದು ಜನರನ್ನು ಹೋರಾಡಲು ಹುರಿದುಂಬಿಸಿದರು. ಜನರು ತಮ್ಮ ಪಂಕ್ತಿಗಳಲ್ಲಿ ಅಲ್ಲಾಹನ ಸ್ಮರಣೆ ಮಾಡುತ್ತಿದ್ದರು. ಆಗ ಹಝ್ರತ್ ಅಬೂಬಕರ್(ರ)ರ ಅತುಲ್ಯವಾದ ಶೂರತೆ ಕಂಡುಬಂತು. ಅವರು ಪ್ರತಿಯೊಬ್ಬ ದುಷ್ಟನಾದ ಸತ್ಯನಿಷೇಧಿಯೊಂದಿಗೆ ಹೋರಾಡಲು ತಯಾರಿದ್ದರು. ಎದುರಾಗಿ ಬರುವವನು ಸ್ವಂತ ಮಗನಾಗಿದ್ದರೂ ಸರಿ. ಹಝ್ರತ್ ಅಬೂಬಕರ್(ರ)ರ ಮಗನಾದ ಅಬ್ದುರ್ರಹ್ಮಾನ್ ಸತ್ಯನಿಷೇಧಿಗಳ ಪರವಾಗಿ ಯುದ್ಧ ಮಾಡಲು ಬಂದಿದ್ದನು. ಅವನು ಇಸ್ಲಾಂ ಸ್ವೀಕರಿಸಿದಾಗ ಅವನು ತನ್ನ ತಂದೆಯಾದ ಅಬೂಬಕರ್(ರ)ರೊಡನೆ ಹೇಳಿದನು: ಬದ್ರ್ ಯುದ್ಧದಂದು ನೀವು ನನ್ನ ನೇರವಾಗಿ ಮತ್ತು ನನಗೆ ಗುರಿಯಾಗಿ ಇದ್ದಿರಿ. ಆದರೆ ನಾನು ನಿಮ್ಮನ್ನು ಕೊಲ್ಲಲಿಲ್ಲ. ಹಝ್ರತ್ ಅಬೂಬಕರ್(ರ) ಹೇಳಿದರು: ಅಲ್ಲಾಹನು ನಿನಗೆ ವಿಶ್ವಾಸವನ್ನು ದಯಪಾಲಿಸಲು ಬಯಸಿದ್ದನು. ಆದ್ದರಿಂದ ನೀನು ಬಚಾವಾದೆ. ಇಲ್ಲದಿದ್ದರೆ, ಅಲ್ಲಾಹನಾಣೆ, ನಾನು ನಿನ್ನನ್ನು ನೋಡಿರುತ್ತಿದ್ದರೆ, ಖಂಡಿತ ಕೊಲ್ಲುತ್ತಿದ್ದೆ.

ಯುದ್ಧ ಮುಗಿದು ಮದೀನ ತಲಪಿದ ನಂತರ ಕೈದಿಗಳಿಂದ ಪರಿಹಾರ ಧನವನ್ನು ಪಡೆದು ಸ್ವತಂತ್ರಗೊಳಿಸಬೇಕೆಂದು ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರಿಗೆ ಸಲಹೆ ನೀಡಿದರು. ಏಕೆಂದರೆ ನಾಳೆ ಅವರಿಂದಲೇ ಇಸ್ಲಾಮಿಗಾಗಿ ತ್ಯಾಗವನ್ನು ಮಾಡುವವರು ಹುಟ್ಟಬಹುದು ಎಂದು ಅವರು ಹೇಳಿದರು. ಆದರೆ ಹಝ್ರತ್ ಉಮರ್(ರ) ಈ ಅಭಿಪ್ರಾಯವನ್ನು ವಿರೋಧಿಸಿದರು ಮತ್ತು ಅವರೆಲ್ಲರನ್ನು ವಧಿಸಬೇಕೆಂದು ಹೇಳಿದರು. ಹಝ್ರತ್ ಪೈಗಂಬರ್(ಸ) ತನ್ನ ಸಹಜವಾದ ಕಾರುಣ್ಯದಿಂದ ಪ್ರಭಾವಿತರಾಗಿ ಹಝ್ರತ್ ಅಬೂಬಕರ್(ರ)ರ ಸಲಹೆಯನ್ನು ಇಷ್ಟಪಟ್ಟರು ಮತ್ತು ಮುಶ್ರಿಕರಲ್ಲಿ ಪರಿಹಾರ ಧನ ಇತ್ಯಾದಿಗಳನ್ನು ಪಾವತಿಸುವವರನ್ನು ಸ್ವತಂತ್ರಗೊಳಿಸಲು ಆದೇಶಿಸಿದರು. ಅನಂತರ ಅದರ ಪ್ರಕಾರವೇ ದೈವಿಕ ಆಜ್ಞೆ ಅವತೀರ್ಣವಾಯಿತು.

ಉಹದ್ ಯುದ್ಧ ಮುಸ್ಲಿಮರ ಮತ್ತು ಮಕ್ಕದ ಖುರೈಶಿಗಳ ನಡುವೆ ನಡೆಯಿತು. ಒಂದು ಕನಸಿನ ಆಧಾರದಲ್ಲಿ, ಮದೀನದಲ್ಲಿ ಇದ್ದುಕೊಂಡೇ ಹೋರಾಟ ನಡೆಸುವುದು ಸರಿಯೆಂದು ಹಝ್ರತ್ ಪೈಗಂಬರ್(ಸ) ಭಾವಿಸುತ್ತಿದ್ದರು. ಆದರೆ ಹೆಚ್ಚಿನ ಯುವ ಸಹಾಬಿಯರು ಬಹಳ ಒತ್ತಾಯದಿಂದ ಮತ್ತು ಆವೇಶದಿಂದ ಪಟ್ಟಣದಿಂದ ಹೊರಗೆ ಹೋಗಿ ತೆರೆದ ಮೈದಾನದಲ್ಲಿ ಯುದ್ಧ ಮಾಡಬೇಕೆಂದು ಹೇಳಿದಾಗ ಅವರ ಮಾತನ್ನು ಅಂಗೀಕರಿಸಲಾಯಿತು. ಅನಂತರ ಹಝ್ರತ್ ಪೈಗಂಬರ್(ಸ) ಯುದ್ಧದ ಆಯುಧಗಳನ್ನು ಹಾಕಿಕೊಂಡು ಅಲ್ಲಾಹನ ಹೆಸರಿನಲ್ಲಿ ಹೊರಗೆ ಬಂದರು. ಆದರೆ ಕೆಲವು ಸಹಾಬಿಯರು ತಿಳಿ ಹೇಳಿದ ಕಾರಣದಿಂದ ಯುವಕರಿಗೆ ತಮ್ಮ ತಪ್ಪಿನ ಅರಿವಾಯಿತು. ಅವರು ಪಶ್ಚಾತ್ತಾಪದಿಂದ ಮತ್ತು ನಾಚಿಕೆಯೊಂದಿಗೆ ಒಂದೇ ಸ್ವರದಲ್ಲಿ ಹೀಗೆ ಹೇಳಿದರು: ನಮ್ಮಿಂದ ತಪ್ಪಾಗಿದೆ. ನೀವು ಯಾವುದನ್ನು ಸರಿಯೆಂದು ಭಾವಿಸುತ್ತೀರೋ ಅದರ ಪ್ರಕಾರ ನಡೆಯಿರಿ. ಹಝ್ರತ್ ಪೈಗಂಬರ್(ಸ) ಹೇಳಿದರು: ಆಯುಧಗಳನ್ನು ಧರಿಸಿದ ನಂತರ ಅದನ್ನು ಕೆಳಗಿಳಿಸುವುದು ಅಲ್ಲಾಹನ ಪ್ರವಾದಿಯ ವೈಭವಕ್ಕೆ ಸೇರಿದ್ದಲ್ಲ. ಅಲ್ಲಾಹನು ಏನಾದರೂ ತೀರ್ಮಾನ ಮಾಡುವುದರ ಹೊರತು. ಆದ್ದರಿಂದ ಈಗ ನೀವು ಸಹನೆಯಿಂದ ವರ್ತಿಸಿದರೆ, ಖಂಡಿತವಾಗಿಯೂ ಅಲ್ಲಾಹನ ಸಹಾಯ ನಿಮ್ಮೊಂದಿಗೆ ಇರುವುದು ಎಂದು ದೃಢವಾಗಿ ನಂಬಿರಿ.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೀಗೆ ಬರೆದಿರುವರು: ಉಹದ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ)ರ ಸುತ್ತ ಇದ್ದ ಸಹಾಬಿಯರು ತೋರಿಸಿದ ತ್ಯಾಗಗಳಂತಹ ಬೇರೆ ಉದಾಹರಣೆಗಳು ಚರಿತ್ರೆಯಲ್ಲಿ ಕಾಣಲು ಸಾಧ್ಯವಿಲ್ಲ. ಈ ಜನರು ಚಿಟ್ಟೆಯಂತೆ ಹಝ್ರತ್ ಪೈಗಂಬರ್(ಸ)ರಿಗಾಗಿ ತಮ್ಮ ಜೀವಗಳೊಂದಿಗೆ ಆಟವಾಡುತ್ತಿದ್ದರು. ಎದುರಾಗಿ ಬರುವ ಪ್ರತಿಯೊಂದು ಹಲ್ಲೆಯನ್ನು ತಮ್ಮ ಮೇಲೆ ಬರುವಂತೆ ಮಾಡುತ್ತಿದ್ದರು. ಅದರೊಂದಿಗೆ ಶತ್ರುಗಳ ಮೇಲೂ ದಾಳಿ ನಡೆಸುತ್ತಿದ್ದರು. ಕೊನೆಗೆ ಹಝ್ರತ್ ಪೈಗಂಬರ್(ಸ)ರ ಸುತ್ತ ಕೇವಲ ಇಬ್ಬರು ವ್ಯಕ್ತಿಗಳು ಮಾತ್ರ ಇದ್ದಂತಹ ಘಳಿಗೆಯೂ ಬಂದಿತು. ಈ ತ್ಯಾಗಶಾಲಿಗಳಲ್ಲಿ ಹಝ್ರತ್ ಅಬೂಬಕರ್(ರ), ಅಲಿ(ರ), ತಲ್‌ಹ(ರ), ಝುಬೇರ್(ರ), ಸಅದ್ ಬಿನ್ ವಖಾಸ್(ರ), ಅಬೂದುಜಾನ ಅನ್ಸಾರಿ(ರ), ಸಅದ್ ಬಿನ್ ಮುಆಧ್(ರ) ಮತ್ತು ತಲ್‌ಹ ಅನ್ಸಾರಿ(ರ)ರ ಹೆಸರುಗಳು ವಿಶೇಷವಾಗಿ ಪ್ರಸ್ತಾಪಿಸಲಾಗಿದೆ.

ಉಹದ್ ಯುದ್ಧದ ವೇಳೆ ಹಝ್ರತ್ ಪೈಗಂಬರ್(ಸ)ರ ಹಲ್ಲುಗಳು ಮುರಿದು ಹೋಗಿದ್ದುವು ಮತ್ತು ಮುಖ ಗಾಯಗೊಂಡಿತ್ತು. ಅವರ ಅನುಗ್ರಹೀತ ಮುಖದಲ್ಲಿ ತಲೆಕವಚದ

ಮುಳ್ಳುಗಳು ನುಗ್ಗಿದ್ದುವು. ಹಝ್ರತ್ ಅಬೂಉಬೈದ(ರ) ಆ ಮುಳ್ಳುಗಳನ್ನು ತನ್ನ ಹಲ್ಲುಗಳಿಂದ ಕಚ್ಚಿ ಹೊರತೆಗೆಯಲು ಪ್ರಯತ್ನಿಸಿದರು. ಆಗ ಅವರ ಮುಂದಿನ ಎರಡು ಹಲ್ಲುಗಳು ಮುರಿದು ಹೋದುವು. ಮುಂದಿನ ಹಲ್ಲುಗಳು ಮುರಿದ ಹೋದ ಜನರಲ್ಲಿ ಅವರು ಅತ್ಯಂತ ಸುಂದರರಾಗಿದ್ದರು. ಅನಂತರ ಹಝ್ರತ್ ಅಬೂಉಬೈದ(ರ) ಹಝ್ರತ್ ಅಬೂಬಕರ್(ರ)ರ ಜೊತೆಗೆ ತಲ್‌ಹ(ರ)ರ ಬಳಿಗೆ ಬಂದರು. ನೋಡಿದಾಗ ಅವರ ದೇಹದಲ್ಲಿ ಈಟಿಗಳ, ಖಡ್ಗಗಳ ಮತ್ತು ಬಾಣಗಳ ಕನಿಷ್ಠ 70 ಗಾಯಗಳಿದ್ದುವು. ತಲ್‌ಹ(ರ)ರ ಬೆರಳು ಸಹ ತುಂಡಾಗಿತ್ತು. ಅವರು ತಲ್‌ಹ(ರ)ರ ಗಾಯಕ್ಕೆ ಮುಲಾಮು ಹಚ್ಚಿ ಪಟ್ಟಿಕಟ್ಟಿದರು.

ಉಹದ್ ಯುದ್ಧದ ಒಂದು ಸಂದರ್ಭದಲ್ಲಿ ಪರ್ವತದ ಕೆಳಗೆ ಮುಸ್ಲಿಮರ ಉಳಿದ ಸೈನ್ಯ ನಿಂತಿದ್ದಾಗ ಅಬೂಸುಫ್‌ಯಾನ್ ಬಹಳ ಉಚ್ಚ ಸ್ವರದಿಂದ ಹೀಗೆ ಹೇಳಿದನು: ನಾವು ಮುಹಮ್ಮದ್‌ನನ್ನು (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ವಧಿಸಿದೆವು. ಅಬೂಬಕರ್, ಉಮರ್‌ರನ್ನೂ ವಧಿಸಿದೆವು. ಹಝ್ರತ್ ಪೈಗಂಬರ್(ಸ)ರ ಆಜ್ಞೆಯ ಕಾರಣದಿಂದ ಇಸ್ಲಾಮಿನ ಸೈನ್ಯದಿಂದ ಯಾವುದೇ ಉತ್ತರ ನೀಡಲಾಗಿಲ್ಲ. ಆಗ ಸತ್ಯನಿಷೇಧಿಗಳು ತಾವು ಹೇಳಿದ್ದು ಸತ್ಯವೆಂದು ಭಾವಿಸಿ ಸಂತೋಷದಿಂದ ಹೀಗೆ ಘೋಷಣೆ ಕೂಗಿದರು. ನಮ್ಮ ಗೌರವಾನ್ವಿತ ವಿಗ್ರಹವಾದ ಹುಬಲಿನಿಗೆ ಜೈಕಾರ. ಅವನು ಇಂದು ಇಸ್ಲಾಮನ್ನು ಕೊನೆಗೊಳಿಸಿದನು. ಆಗ ಏಕದೇವನಾದ ಅಲ್ಲಾಹನ ಗೌರವದ ಪ್ರಶ್ನೆ ಎದ್ದಾಗ ಮತ್ತು ಶಿರ್ಕಿನ ಘೋಷಣೆ ಮೈದಾನದಲ್ಲಿ ಮೊಳಗಿದಾಗ ಹಝ್ರತ್ ಪೈಗಂಬರ್(ಸ)ರ ಆದೇಶದ ಪ್ರಕಾರ ಸಹಾಬಿಯರು ಅತ್ಯಂತ ಆವೇಶದಿಂದ ಹೀಗೆ ಉತ್ತರಿಸಿದರು: **ಅಲ್ಲಾಹು ಅಅ್‌ಲಾ ವ ಅಜಲ್ಲ್. ಅಲ್ಲಾಹು ಅಅ್‌ಲಾ ವಅಜಲ್ಲ್.** ಏಕನೂ ಸಹಭಾಗಿ ಇಲ್ಲದವನೂ ಆದ ಅಲ್ಲಾಹನೇ ಗೌರವಾನ್ವಿತನು ಮತ್ತು ಅವನ ವೈಭವವೇ ಶ್ರೇಷ್ಠ. ಈ ಉತ್ತರದ ಪ್ರಭಾವ ಸತ್ಯನಿಷೇಧಿಗಳ ಸೈನ್ಯದ ಮೇಲೆ ಎಷ್ಟು ಉಂಟಾಯಿತು ಎಂದರೆ, ಅವರ ಹೃದಯಗಳು ಒಳಗೊಳಗಿಂದಲೇ ಭಯಗೊಂಡವು. ಬೇಗನೇ ಮಕ್ಕಕ್ಕೆ ಮರಳಿ ಹೋಗುವುದೇ ಲೇಸು ಎಂದು ಅವರು ಭಾವಿಸಿದರು. ಆದರೆ ಹಝ್ರತ್ ಪೈಗಂಬರ್(ಸ) ಮುಂಜಾಗ್ರತೆ ಎಂಬಂತೆ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಝುಬೇರ್(ರ)ರನ್ನು ಒಳಗೊಂಡ 70 ಸಹಾಬಿಯರ ಒಂದು ಸಂಘವನ್ನು ಅವರ ಹಿಂದೆ ಕಳುಹಿಸುತ್ತಾ ಹೀಗೆ ಹೇಳಿದರು: ಖುರೈಶಿಗಳು ಒಂಟೆಗಳ ಮೇಲೆ ಸವಾರರಾಗಿ ಮತ್ತು ಕುದುರೆಯನ್ನು ಸವಾರಿಯಿಲ್ಲದೇ ನಡೆಸುತ್ತಿದ್ದರೆ, ಅವರು ಮಕ್ಕದ ಕಡೆಗೆ ಮರಳಿ ಹೋಗುತ್ತಿದ್ದಾರೆ ಎಂದು ತಿಳಿಯಿರಿ. ಆದರೆ ಅವರು ಕುದುರೆಗಳ ಮೇಲೆ ಸವಾರರಾಗಿದ್ದರೆ ಅವರು ಸದುದ್ದೇಶವನ್ನು ಹೊಂದಿಲ್ಲವೆಂದು ತಿಳಿಯಿರಿ. ಅನಂತರ ಹಝ್ರತ್ ಪೈಗಂಬರ್(ಸ) ಬಹಳ ಆವೇಶದಿಂದ ಹೀಗೆ ಹೇಳಿದರು: ಖುರೈಶಿಗಳು ಈಗ ಮದೀನದ ಮೇಲೆ ದಾಳಿ ನಡೆಸಿದರೆ ಅಲ್ಲಾಹನಾಣೆ, ನಾವು ಅವರೊಡನೆ ಹೋರಾಡಿ ಅವರಿಗೆ ಪ್ರತಿದಾಳಿಯ ರುಚಿಯನ್ನು ಸವಿಸುವೆವು. ಅಂತೂ ಖುರೈಶಿಗಳ ಸೈನ್ಯ ಮಕ್ಕದ ಕಡೆಗೆ ಹೋಗುತ್ತಿದೆ ಎಂದು ಬೇಗನೇ ಸುದ್ದಿ ಲಭಿಸಿತು.

ಈ ಪ್ರಸ್ತಾಪ ಮುಂದುವರೆಯುವುದು. ಇನ್‌ಶಾ ಅಲ್ಲಾಹ್.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّاٰتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِی الْقُرْبٰی
وَيَنْهٰی عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ٥ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*
*At, Masjid Mubarak, Islamabad, Tilford, UK, On 21-01-2022*
**Summarized by** *Majlis Ansarullah Bharat*
***Kannada Translation****:* Moulavi Inamullah for Kannada Desk, Qadian
***Reviewed by****:* M.P Ibrahim |***Layout****:* U Basheer Ahmad
***Published By****:* Kannada Isha'at Team for Nazarath Nashr-O-Isha'ath, Qadian
**Email**: *khutuba.kannada@gmail.com*